ನನ್ನ ಓದು

# ಅನಾಥ ಚಪ್ಪಲಿಗಳು ಮತ್ತು ಅನಾಮಿಕ ತಾಯಂದಿರು



**ರಾಜೇಂದ್ರ ಚೆನ್ನಿ**

ಕೆಲವು ಪುಸ್ತಕಗಳನ್ನು ಓದಿದರೆ ಯಾಕಾದರೂ ಇದನ್ನು ಓದಿದೆ, ಇನ್ನು ಕೊನೆಗಾಲದವರೆಗೂ ನಿದ್ದೆ-ಎಚ್ಚರ-ಕನಸುಗಳಲ್ಲಿ ಇದು ತಣ್ಣಗಿನ ಬರ್ಫ್‌ನ ಚಾಕುವಿನಂತೆ ಕೊರೆಯುತ್ತಾ ಇರುತ್ತದೆ ಎನಿಸುತ್ತದೆ. ಅದೇ ಹೊತ್ತಿಗೆ, ಇವುಗಳನ್ನು ಓದದೇ ಇದ್ದರೆ ಮನುಷ್ಯ ಅನುಭವದ ಕಠೋರವೂ, ಕ್ರೂರವೂ, ಆದರೆ ವಾಸ್ತವವೂ ಆದ ಅನುಭವಗಳನ್ನು ಅರಿಯದೇ ಹೋದಂತೆ ಆಗುತ್ತದೆಯಂದೂ ಅನ್ನಿಸುತ್ತದೆ. ಇಂಥ ಪುಸ್ತಕಗಳಲ್ಲಿ ಹಿಂದಿ ಬರಹಗಾರ್ತಿ, ಪ್ರಸಿದ್ಧ ಸಂಶೋಧಕಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿಯಾಗಿರುವ ಗರಿಮಾ ಶ್ರೀವಾಸ್ತವ ಅವರ 'ದೇಹವೇ ದೇಶ' ಎನ್ನುವ ಕೃತಿ ನನ್ನನ್ನು ಇನ್ನಿಲ್ಲದಂತೆ ಕಾಡಿದೆ. ಇದನ್ನು ವಿಕ್ರಮ ವಿಸಾಜಿಯವರ ಅದ್ಭುತವಾದ ಅನುವಾದದಲ್ಲಿ ಓದಿದೆ.

ಗರಿಮಾ ಅವರಿಗೆ ಮಹಾವಿಘಟನೆ ಹಾಗೂ ಯುದ್ಧಗಳಿಂದ ಬವಳಿಹೋದ ಕ್ರೊವೇಶಿಯಾ ದೇಶದ ಜಾಗ್ರೇಬ್ ವಿಶ್ವವಿದ್ಯಾಲಯದಲ್ಲಿ ಹಿಂದಿ ವಿಭಾಗವನ್ನು ನಡೆಸುವ ಕಾರ್ಯದ ಮೇಲೆ 2009-2010ರಲ್ಲಿ ಹೋಗುವ ಅವಕಾಶ ಸಿಕ್ಕುತ್ತದೆ. ಅಲ್ಲಿ ಕ್ರಮೇಣವಾಗಿ ಹಿಂದಿಯ ಕೆಲಸದ ಜೊತೆಗೆ ಸೆರ್ಬಿಯಾ ಜೊತೆಗೆ ನಡೆದ ಕ್ರೊವೇಶಿಯಾದ ಯುದ್ಧದ ಕಾಲದಲ್ಲಿ ಭಾಷೆಗೂ ನಿಲುಕದ ಹಿಂಸೆ-ಅತ್ಯಾಚಾರಗಳನ್ನು ಅನುಭವಿಸಿದ ಮಹಿಳೆಯರ ಅನುಭವಗಳನ್ನು ಆಲಿಸುವ ಅವಕಾಶ ದೊರೆಯುತ್ತದೆ. ಯುದ್ಧಗಳ ಬಗೆಗಿನ ನಮ್ಮ ತಿಳಿವಳಿಕೆಯು ಕೇವಲ ಅಂಕಿಸಂಖ್ಯೆಗಳಿಗೆ ಅಥವಾ ಬೀಸುಹೇಳಿಕೆಗಳಿಗೆ ಸೀಮಿತವಾಗಿರುತ್ತದೆ. ಆದರೆ ಅದನ್ನು ಖುದ್ದು ಅನುಭವಿಸಿದವರನ್ನು ನೋಡಿ ಅವರ ಮಾತುಗಳಲ್ಲಿಯೇ ಅವರ ಅನುಭವಗಳನ್ನು ಕೇಳುವುದು ಕೇಳುವವರ ವ್ಯಕ್ತಿತ್ವವನ್ನೇ ಛಿದ್ರಗೊಳಿಸುವಂಥ ಆಘಾತ ಹಾಗೂ ನೋವುಗಳನ್ನು ತರುವ ಅನುಭವ. ಸುಂದರವಾದ ಬಾಲ್ಕನ್ ಉಪಖಂಡದ ಈ ಭಾಗದ ಬಗ್ಗೆ ಪ್ರವಾಸ ಕಥನವೊಂದನ್ನು ಬರೆದಿದ್ದರೆ ಸಾಲದೆ ಎನ್ನುವುದು ಗರಿಮಾ ಅವರನ್ನು ಬಾಧಿಸುತ್ತದೆ. ಅವರು ನಿರ್ಲಿಪ್ತ, ವಸ್ತುನಿಷ್ಠ ವರದಿಗಾರ್ತಿಯಲ್ಲ, ಸೂಕ್ಷ್ಮ ಸಂವೇದನೆಯ ಸ್ತ್ರೀ. ಹೀಗಾಗಿ ಆ ಮಹಿಳೆಯರ ಜೊತೆಗಿನ ಸಂಭಾಷಣೆಗಳು ಬಹುಬೇಗನೆ ಆಪ್ತತೆ, ಸ್ನೇಹದ ವಿದ್ಯಮಾನಗಳಾಗಿ ಬಿಡುತ್ತವೆ. ಇವು ನೋವಿನ ಕಥನಗಳು. ಅದಕ್ಕಿಂತ ಹೆಚ್ಚಾಗಿ ಬದುಕಬೇಕೆನ್ನುವ ಛಲ, ಮತ್ತೆ ಬದುಕು ಕಟ್ಟುಕೊಳ್ಳಬೇಕೆನ್ನುವ ನಿರ್ಧಾರ, ಸೃಷ್ಟಿಕರ್ತನೊಬ್ಬನಿದ್ದರೆ ಅವನ ಕಲ್ಪನೆ ಹಾಗೂ ಶಕ್ತಿಯನ್ನು ಮೀರಿದ ನೋವುಗಳನ್ನು ಮೆಟ್ಟಿನಿಲ್ಲುವ ರಹಸ್ಯಮಯವಾದ ಕರ್ತೃತ್ವಶಕ್ತಿಯ ಕಥನಗಳಾಗಿವೆ.

ಮಹಾಯುದ್ಧಗಳು, ಆಫ್ರಿಕಾದಂಥ ಅನೇಕ ಖಂಡಗಳಲ್ಲಿ ನಡೆಯುತ್ತಲೇ ಇರುವ ಜನಾಂಗೀಯ ಯುದ್ಧಗಳು ಮತ್ತು ಈಗಲೂ ನಡೆಯುತ್ತಿರುವ ಯುಕ್ರೇನ್ ಹಾಗೂ ಪ್ಯಾಲೆಸ್ತೈನ್ ಯುದ್ಧಗಳು - ಹೀಗೆ ಇಂದಿನ ಮನುಷ್ಯ ಚರಿತ್ರೆಯ ಬರ್ಬರತೆ ಹಾಗೂ ರಕ್ತಪಿಪಾಸು ಗುಣ -ಇವು ಮಾತ್ರ ಮನುಷ್ಯ ಅಸ್ತಿತ್ವದ